ಸಾಕ್ಷಿಯು ಕ್ರಮವಾಗಿ ಪ್ರಮಾಣಿಕರಿಸಿದ ದಿನಾಂಕಃ 1-3-2018
ಮುಂದುವರಿದ ಪಾಟಿ ಸವಾಲುಃ ಶ್ರೀ ಎನ್ ಸಿ ಸಿ ವಕೀಲರಿಂದ

ರೆವಿನ್ಯೂ ಸರ್ವೆ ನಂಬರ್ ಪ್ರಕಾರ ನಾನು ಆಸ್ತಿಯನ್ನು ಖರೀದಿ ಮಾಡಿ ನಂತರ ಸದರಿ ಪ್ರಕಾರ ಆರ್ ಟಿ ಸಿ ಯನ್ನು ನನ್ನ ಹೆಸರಿಗೆ ಮಾಡಿಕೊಂಡಿರುತ್ತೇನೆ . ನಿಪಿ 33 ರಿಂದ 36 ರವರೆಗೆ ಆರ್ ಟಿ ಸಿ ಗಳು ನನ್ನ ಹೆಸರಿಗೆ ಬದಲಾಗಿರುವ ಆರ್ ಟಿ ಸಿ ಯಾಗಿರುತ್ತದೆ . ಕ್ರಯ ಪತ್ರದ ಆಧಾರದ ಮೇಲೆ ನಿಪಿ 37 ರಂತೆ ನನ್ನ ಹೆಸರಿಗೆ ಖಾತೆಯಾಗಿರುತ್ತದೆ . ನಿಪಿ 33 ರಿಂದ 37 ರಲ್ಲಿ ತೋರಿಸಿರುವ ವಿಸ್ತೀರ್ಣ ಜಾಗಕ್ಕೆ ನಾನು ಹಕ್ಕುದಾರ ಎಂದರೆ ಸರಿ . ಸದರಿ ನಿಪಿ 33 ರಿಂದ 37 ಆರ್ ಟಿ ಸಿ ಗಳ ವಿಸ್ತೀರ್ಣಕ್ಕಿಂತ ಜಾಸ್ತಿ ಜಾಗ ಸ್ವಾಧೀನ ಹೊಂದಿದ್ದರೆ ಯಾರದು ಎಂದು ಹೊಂದಿರುತ್ತೀರಾ ಎಂದರೆ ಸಾಕ್ಷಿ ನನ್ನದೆ ಎಂದು ಹೊಂದಿರುತ್ತೇವೆ ಎನ್ನುವರು . ನನ್ನ ಹಕ್ಕಿನ 36 ಸೆಂಟ್ ಜಾಗಕ್ಕೆ ಪೂರ್ವಕ್ಕೆ ವಾದಿಯವರ ಜಾಗವಿದೆ ಎಂದರೆ ಸರಿ . ಪಶ್ಚಿಮಕ್ಕೆ ಸಿಂಗ್ರಿ ಶೆಟ್ಟಿಯವರ ಮಕ್ಕಳ ಜಾಗವಿದೆ ಎಂದರೆ ಸರಿ. ಉತ್ತರಕ್ಕೆ ಮತ್ತು ದಕ್ಷಿಣಕ್ಕೆ ರಸ್ತೆ ಇದೆ ಎಂದರೆ ಸರಿ . ವಾದಿಯವರ ದಾವಾ ಎ ಶೆಡ್ಯೂಲ್ ಸ್ವತ್ತಿನ ಪೂರ್ವಕ್ಕೆ ಹುಲ್ಲಳ್ಳಿ ಮಂಜಯ್ಯಶೆಟ್ಟಿರವರ ಜಾಗವಿದೆ ಎಂದರೆ ಸರಿ . ಪಶ್ಚಿಮಕ್ಕೆ ಜಿ ಕೆ ಲಕ್ಷ್ಮಿನರಸಿಂಹಯ್ಯರವರ ಜಾಗವಿದೆ ಎಂದರೆ ಸರಿ . ಸಾಕ್ಷಿ ಮುಂದುವರಿದು ಸದರಿ ಜಾಗವನ್ನು ನಾವು ಖರೀದಿ ಮಾಡಿರುತ್ತೇವೆ ಎನ್ನುವರು . ಉತ್ತರ ಮತ್ತು ದಕ್ಷಿಣಕ್ಕೆ ರಸ್ತೆ ಇದೆ ಎಂದರೆ ಸರಿ .

ದಾವಾ ಶೆಡ್ಯೂಲ್ ಎ ಸೊತ್ತಿನ ಮೇಲೆ ನನಗೆ ಯಾವುದೇ ಹಕ್ಕು ಮತ್ತು ಅಧಿಕಾರ ಇಲ್ಲ ಎಂದರೆ ಸರಿ . ವಾದಿಯವರ ಜಾಗದಲ್ಲಿ ನನ್ನ ಸ್ವಾಧೀನ ಕಂಡು ಬಂದರೆ ನಾನು ಬಿಟ್ಟು ಕೊಡುವುದಕ್ಕೆ ಬಾಧ್ಯಸ್ತನು ಎಂದರೆ ಸಾಕ್ಷಿ ನನ್ನ ಸ್ವಾಧೀನದಲ್ಲಿ ಇಲ್ಲ ಎನ್ನುವರು . ದಿ 20-8-2013 ರಂದು ವಾದಿಯವರು ಅವರ ಜಾಗವನ್ನು ಸರ್ವೆ ಮಾಡಿ ಹದ್ದುಬಸ್ತು ಮಾಡಿಸಲು 5 ನೇ ಪ್ರತಿವಾದಿರವರ ಕಚೇರಿಗೆ ಆರ್ಜಿ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುವರು .

2010 ರಲ್ಲಿ ನನ್ನ ಮನೆಯನ್ನು ನವೀಕರಣ ಮಾಡುವ ಸಮಯದಲ್ಲಿ ವಾದಿಯವರಿಗೆ ಸೇರಿದ ದಾವಾಸ್ತಿ ಎ ಶೆಡ್ಯೂಲ್ ಪೈಕಿ 2 ಸೆಂಟ್ ಜಾಗವನ್ನು ಒತ್ತುವರಿ ಮಾಡಿ ಸ್ವಾಧೀನ ಹೊಂದಿರುತ್ತೀರಿ ಎಂದರೆ ಸುಳ್ಳು . ನಾನು ಸದರಿ ರೀತಿ ವಾದಿಯವರ ಸ್ವತ್ತನ್ನು ಒತ್ತುವರಿ ಮಾಡಿಕೊಂಡು ಸ್ವಾಧೀನ ಹೊಂದಿಕೊಂಡು ಸದರಿ ಜಾಗವನ್ನು ಲಪಾಟಾಯಿಸುವ ಉದ್ದೇಶದಿಂದ ವಾದಿಯವರಿಗೆ ಸದರಿ ಸ್ವತ್ತನ್ನು ಬಿಟ್ಟುಕೊಡುವುದನ್ನು ತಪ್ಪಿಸಲು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಕನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇ ಕೇ ಸರಿ ಇದ

Sd/-

ಪ್ರ ದ ನ್ಯಾ ದಂ., ಸೋಮವಾರಪೇಟೆ.